**ಯಾವ ಕಡೆಗೆ ಹೋಗ್ತಾ ಇದ್ದೀವಿ ಅನ್ನಿಸುತ್ತೆ... ನಾವು ಇದನ್ನು ಎಲ್ಲಿ ಸರಿ ಮಾಡಿಕೊಳ್ಳಬೇಕು?**

ಆಗಲೂ ಜಾತಿಗಳಿದ್ದವು, ಆದರೆ ಮನಸ್ಸು ವಿಶಾಲವಾಗಿತ್ತು, ವಿಶ್ವಾಸಕ್ಕೆ ಕೊರತೆ ಇರಲಿಲ್ಲ. ಇವತ್ತಿನ ಹಾಗೆ ಮನಸ್ಸುಗಳು ಒಡೆದಿರಲಿಲ್ಲ... ಆಗ ಎಲ್ಲ ಜಾತಿಗಳವರೂ ತಮ್ಮ ತಮ್ಮ ಜಾತಿಯ ಆಚಾರ, ವಿಚಾರ, ನಂಬಿಕೆಗಳನ್ನ ಪಾಲಿಸಿಕೊಂಡು ಅದನ್ನ ತಮ್ಮ ಮನೆ ಒಳಗೇ ಇಟ್ಟುಕೊಳ್ತಿದ್ರು. ಆದರೆ ಈಗ ಜಾತೀನೆ ಬದುಕಿಗಿಂತ ದೊಡ್ಡದಾಗಿದೆ... ವಿಶಾಲವಾದ ಮನಸ್ಸು, ಅಂತಃಕರಣ ಇರಬೇಕು ಅಂತ ಯಾರಿಗೂ ಅನ್ನಿಸ್ತಾ ಇಲ್ಲ. ಸ್ವಾರ್ಥ ಜಾಸ್ತಿ ಆಗ್ತಿದೆ, ಸ್ವಾರ್ಥವೇ ಇದಕ್ಕೆಲ್ಲ ಕಾರಣ ಅನ್ನಿಸುತ್ತೆ, 'ನನ್ನ ಜಾತಿ' ಅನ್ನೋದೇ ಸ್ವಾರ್ಥ ಅಲ್ವ? ಕೆಲವು ಸರ್ತಿ ನಮ್ಮ ಜಾತಿಯಲ್ಲಿ ಇಂಥವರು ಎಂತೆಂತ ದೊಡ್ಡ ಸಾಧನೆ ಮಾಡಿದ್ದಾರೆ, ಎಷ್ಟೊಂದು ನಿಸ್ವಾರ್ಥವಾಗಿ ಬದುಕಿ ಸಾರ್ವಜನಿಕ ಕೆಲಸ ಮಾಡಿದ್ದಾರೆ ಅಂತ ನಮಗೆ ಆಶ್ಚರ್ಯ ಆಗುತ್ತಲ್ಲ, ಇದೇ ತರದ ಭಾವನೆ ಬೇರೆ ಜಾತಿಯವರು ಒಳ್ಳೆಯ ಕೆಲಸ ಮಾಡಿದಾಗಲೂ ನಮಗೆ ಆಗಬೇಕು. ಆಗ ಮನಸ್ಸು ತಿಳಿಯಾಗೋಕೆ ಶುರುವಾಗುತ್ತೆ...

◆ **ನಿಮಗೆ ಸಸ್ಯಲೋಕದ ಬಗೆಗೆ, ಅದರ ಬರವಣಿಗೆ ಬಗ್ಗೆ ಆಸಕ್ತಿ ಹುಟ್ಟಿದ್ದು ಹೇಗೆ? ನಿಮ್ಮ 'ಗಿಡಗಂಟೆಯಾ ಕೊರಳು' ಪುಸ್ತಕದ ಭಾಷೆ ನನಗೆ ಕುತೂಹಲಕರ ಅನ್ನಿಸುತ್ತೆ. ಇಲ್ಲಿನ ಬರಹಗಳನ್ನು ನಾವು ಆತ್ಮಕಥಾನಕವಾಗಿಯೂ, ಪ್ರಬಂಧದ ಮಾದರಿಯಲ್ಲೂ, ಲಹರಿಯಾಗಿಯೂ, ವೈಜ್ಞಾನಿಕ ಬರಹವಾಗಿಯೂ ಓದಬಹುದು. ನೀವು ಬರೆಯುವ ಕಾಲದಲ್ಲಿದ್ದ ಮಾದರಿಗಳಿಗಿಂತ ಇದು ಭಿನ್ನವಾಗಿದೆ ಮತ್ತು ನಾವು ಬಳಸುವ ಭಾಷೆ ನಮ್ಮ ಬದುಕಿನಿಂದಲೇ ಹುಟ್ಟಿರುತ್ತೆ ಅಂತ ನನ್ನ ನಂಬಿಕೆ. ನಿಮ್ಮ ಭಾಷೆಗೆ ಈ ಹದ ಎಲ್ಲಿಂದ ಬಂತು?**

ಏನೋಪ್ಪ ತಿಳಿಯಲ್ಲ... ಪೊಯೆಟ್ ಅಟ್ ಹಾರ್ಟ್ ಅನ್ತಾರಲ್ಲ ಹಾಗಿರಬೇಕು (ನಗು). ಒಮ್ಮೆ 'ಲಂಕೇಶ್ ಪತ್ರಿಕೆ'ಗೆ ನಾರ್ಕೊಟಿಕ್ ಡ್ರಗ್ಸ್ ಬಗ್ಗೆ ಲೇಖನ ಬರೆದು ಕಳಿಸಿದ್ದೆ. ಆಗೆಲ್ಲ ಕಂಪ್ಯೂಟರ್ ಇರಲಿಲ್ಲವಲ್ಲ... ಕೈಯಲ್ಲಿ ಬರೆದಿದ್ದು, ಪುಟಗಟ್ಟಲೆ ಲೇಖನ ಆಗಿತ್ತು... ಲಂಕೇಶ್ ಅವರು ಅದನ್ನು ಓದಿ, 'ಪದ್ಮಾ ಅವರೆ, ಇದನ್ನು ಚಿಕ್ಕದಾಗಿ ಮಾಡಿ, ಸರಳವಾಗಿ ಬರೀರಿ, ತೇಜಸ್ವಿಯವರನ್ನ ನಿಮ್ಮ ಮಾಡೆಲ್ ಆಗಿ ಇಟ್ಕೊಳ್ಳಿ' ಅಂತ ಹೇಳಿದರು. ಶ್ರೀರಾಮ್ ಕೂಡ, 'ಏನೇ ಬರೆದರೂ ಬೇರೆಯವರಿಗೆ ಅರ್ಥ ಆಗೋ ಹಾಗೆ ಬರೀಬೇಕು...' ಅಂತ ಹೇಳಿದ್ದು ನನ್ನ ಬರವಣಿಗೆಯನ್ನ ತಿದ್ದಿಕೊಳ್ಳೋಕೆ ಸಹಾಯ ಮಾಡ್ತು.

ಚಿಕ್ಕಂದಿನಿಂದಲೂ ನನಗೆ ಗಿಡಗಳನ್ನ ಕುರಿತು ಏನೋ ವಿಶೇಷ ಆಸಕ್ತಿ. ಜೊತೆಗೆ, ನನ್ನ ತಂದೆ ಜೊತೆ ಬೇರೆ ಊರುಗಳಿಗೆ ಕಾರಿನಲ್ಲಿ ಹೋಗ್ತಾ ಇರೋವಾಗ, ಸುತ್ತಮುತ್ತಲಿನ ಮರಗಳು, ಆಕಾಶದ ಬಣ್ಣ, ಅದ್ರಲ್ಲಿ ಮೂಡ್ತಾ ಇದ್ದ ಆಕಾರಗಳು, ಯಾವಯಾವುದೋ ಹೂಗಿಡಗಳನ್ನು ತೋರಿಸ್ತಾ ಅವರು ನನ್ನ ಗಮನವನ್ನ ಸೆಳೀತಾ ಇದ್ರು. ನಮ್ಮ ತಂದೆ ಮಾತಾಡ್ತಾ ಇದ್ದಿದ್ದೇ ಬಹಳ ಕಡಿಮೆ. ಹೀಗೆ ಅವರು ಏನಾದ್ರು ಹೇಳಿದಾಗ ಅದರಲ್ಲಿ ಆಸಕ್ತಿ ಹುಟ್ತಾ ಇತ್ತು. ಆನಂತರ ನನಗೆ ಇಷ್ಟವಾದ ಬಾಟನಿ, ಝುವಾಲಜಿ ವಿಷಯಗಳನ್ನ ತಗೊಂಡು ಡಿಗ್ರಿ ಮಾಡಿದೆ. ಚಿಕ್ಕಂದಿನಿಂದ ನನಗಿದ್ದ ವೈಜ್ಞಾನಿಕ ಹಿನ್ನೆಲೆ ಮತ್ತು ಬರೆಯೋ ಮನಸ್ಸು ಎರಡೂ ಸೇರಿಕೊಂಡು ನನ್ನನ್ನು ಬರವಣಿಗೆಗೆ ಹಚ್ಚಿತು ಮತ್ತು ಅವೆಲ್ಲ ಬರವಣಿಗೆಗಳು ತಾವೇ ಬರೆಸಿಕೊಂಡವು ಅನ್ನಿಸುತ್ತೆ. ಬರೀ ವೈಜ್ಞಾನಿಕವಾಗಿ ಒಂದು ಗಿಡ ಅಥವಾ ಹೂವಿನ ಬಗ್ಗೆ ಹೇಳ್ತಾ ಹೋದ್ರೆ, ವಿಜ್ಞಾನದ ಹಿನ್ನೆಲೆ ಇರದೇ ಇರುವವರಿಗೆ ಅದನ್ನು ಓದೋದು ಬರಡು, ಹೊರೆ ಅನ್ನಿಸುತ್ತೆ ಅಲ್ವಾ? ಒಂದು ಹೂವನ್ನ, ಗಿಡವನ್ನ ನೋಡ್ತಾ ಇದ್ರೆ ನಮ್ಮ ಮನಸ್ಸಿಗೆ ಹಲವಾರು ವಿಷಯಗಳು ಬಂದು ಹೋಗ್ತವೆ, ಹಾಗೆ ಸಹಜವಾಗಿ ಅನ್ನಿಸಿದ್ದನ್ನು ನಾನು ಬರೀತಾ ಹೋದೆ ಅಷ್ಟೆ. ವೈಜ್ಞಾನಿಕ ವಿವರಗಳೂ ಅದರಲ್ಲಿ ಬರ್ತವೆ, ಆದರೆ ಕಡಿಮೆ. ಬಹುಶಃ ಈ ತರದ ಅನಿಸಿಕೆ, ನೋಟವು ನನ್ನ ವಿಜ್ಞಾನೇತರ ಪುಸ್ತಕಗಳ ಅಂದರೆ, ಕತೆ, ಕವಿತೆ, ಕಾದಂಬರಿ, ಬೇರೆಬೇರೆ ಅನುವಾದಗಳ ಓದಿನಿಂದ ಬಂದಿರಬಹುದು. ಮತ್ತು ನಾನು ಬರೆಯೋದು ಸರಳವಾಗಿರಬೇಕು, ಬೇರೆಯವರಿಗೆ ಅರ್ಥ ಆಗಬೇಕು ಅನ್ನೋ ನಿಲುವಿನಿಂದಲೂ ನನ್ನ ಶೈಲಿ ರೂಪುಗೊಂಡಿರಬಹುದು.

ಸಸ್ಯಗಳ ಬಗ್ಗೆ ಬರೆಯೋಕೆ ಶುರು ಮಾಡೋ ಬಹಳ ವರ್ಷಗಳ ಕೆಳಗೆ ನಾನು ಪ್ರಸಿದ್ಧ ಸಂಗೀತಗಾರರಾದ